ಇ) *ಸರ್ಕಾರದ ಗೋದಾಮಿನಲ್ಲಿ ಅಕ್ಕಿ ಹಾಗೂ ಗೋಧಿಯ ದಾಸ್ತಾನಿನ ಕೊರತೆ ಇದೆಯೇ? ಇದ್ದರೆ ಕಾರಣಗಳೇನು?*

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕೇಂದ್ರ ಸರ್ಕಾರವು 1.6.97 ರಿಂದ ನಿರ್ದಿಷ್ಟಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಾರಿಗೆ ತಂದಂದಿನಿಂದ ರಾಜ್ಯಕ್ಕೆ ಮಾಹೆಯಾನ ಹಂಚಿಕೆಯಾಗುತ್ತಿದ್ದ 1.52 ಲಕ್ಷ ಮೆ.ಟನ್ನಿನಿಂದ 75000 ಮೆ. ಟನ್‌ಗೆ ಇಳಿಸಲಾಗಿದೆ. ಇದರಿಂದಾಗಿ ಬಡತನ ರೇಖೆಗಿಂತ ಮೇಲ್ಪಟ್ಟ ಕುಟುಂಬಗಳಿಗೆ ವಿತರಣೆ ಮಾಡುವ ಆಹಾರಧಾನ್ಯಗಳನ್ನು ಕಡಿತಗೊಳಿಸಲಾಗಿದೆ. ಆದರೆ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನೀಡುವ ಆಹಾರಧಾನ್ಯ ಪ್ರಮಾಣದಲ್ಲಿ ಯಾವುದೇ ಕಡಿತವಿರುವುದಿಲ್ಲ. ರಾಜ್ಯ ಸರ್ಕಾರವು ಈಗ 60.78 ಲಕ್ಷ ಬಿ.ಪಿ.ಎಲ್ ಕುಟುಂಬಗಳಿಗೆ 10 ಕೆಜಿಯಂತೆ ಮಾಹೆಯಾನ ಆಹಾರಧಾನ್ಯಗಳನ್ನು ವಿತರಿಸುತ್ತಿದೆ.

ಆ) ಹಿಂದಿನ ಹಾಗೆಯೇ ಬಿ.ಪಿ.ಎಲ್. ಕುಟುಂಬಗಳಿಗೆ 10 ಕೆಜಿಯಂತೆ ಮಾಹೆಯಾನ ವಿತರಿಸಲಾಗುತ್ತಿದೆ. ಆದರೆ ಬಡತನ ರೇಖೆಗಿಂತ ಮೇಲಿನ ಕುಟುಂಬಗಳಿಗೆ ವಿತರಣೆಯಾಗುವ ಆಹಾರಧಾನ್ಯಗಳ ಪ್ರಮಾಣ ಕಡಿಮೆಯಾಗಿದೆ. ಆದ್ದರಿಂದ ಬಡ ವರ್ಗದ ಜನತೆಗೆ ಅನ್ಯಾಯವಾಗಿರುವುದಿಲ್ಲ.

ಇ) ಇಲ್ಲ. ಪ್ರಶ್ನೆ (ಅ)ಗೆ ಉತ್ತರ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೊಡಗಿನ ಕಿರು ನೀರಾವರಿ ಯೋಜನೆಯ ಉಪವಿಭಾಗ ಆರಂಭಿಸುವ ಕುರಿತು

2079 - ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗಿನಲ್ಲಿ ಕಿರು ನೀರಾವರಿ ಯೋಜನೆಯ ಉಪ ವಿಭಾಗವನ್ನು ಆರಂಭಿಸುವ ಕುರಿತು ಸರ್ಕಾರದ ಏನು ಕ್ರಮ ಕೈಗೊಂಡಿದೆ.*

ಆ) *ಈ ಯೋಜನೆಗಾಗಿ 1994-95, 1995-96, 1996-97ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಹೊಂದಿರುವ ಮೊತ್ತವೆಷ್ಟು, ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ರೂಪಿಸಿರುವ ಕಾರ್ಯಕ್ರಮಗಳೇನು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಕೊಡಗಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗವನ್ನು ಆರಂಭಿಸಲು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಸಣ್ಣ ನೀರಾವರಿ ಉಪ ವಿಭಾಗವನ್ನು ಮಡಿಕೇರಿಗೆ ಸ್ಥಳಾಂತರಿಸಲು ದಿನಾಂಕ 5.7.97ರ ಆದೇಶ ಸಂಖ್ಯೆ : ನೀಇ 55 ಸನೀರಾ 97ರಲ್ಲಿ ಆದೇಶಿಸಿದೆ. ಅದರಂತೆ, ಮಡಿಕೇರಿಯಲ್ಲಿ ಉಪ ವಿಭಾಗವನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಯೋಜನೆಗೆ ಬಿಡುಗಯಾದ ಮೊತ್ತ ಈ ಕೆಳಕಂಡತಿರುತ್ತದೆ.

(ಲಕ್ಷ ರೂ.ಗಳಲ್ಲಿ)

		ಯೋಜನೆ	ಯೋಜನೇತರ
1.	1994-95	77.24	34.25
2.	1995-96	59.60	33.38
3.	1996-97	47.21	27.77
		184.05	**95.40**

ಈ ಯೋಜನೆಯ ಅನುಷ್ಠಾನಕ್ಕೆ ವಿವಿಧ ಶೀರ್ಷಿಕೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ. ಮೇಲ್ಕಂಡ ವರ್ಷಗಳಲ್ಲಿ ಒಟ್ಟು 87 ಕಾಮಗಾರಿಗಳು ಸೇರಿದ್ದು, 30 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 8 ಕಾಮಗಾರಿಗಳು ಪ್ರಗತಿಯಲ್ಲಿವೆ. 2 ಕಾಮಗಾರಿಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು, ಉಳಿದ 47 ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗಿರುತ್ತದೆ.

ಕೊಡಗಿನಲ್ಲಿ ಸೇಂದಿ ಇಳಿಸುವ ಹಕ್ಕುಗಳ ಕುರಿತು

2080 - ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಹಿಂದೆ ಕುಲ ಕಸುಬಾಗಿದ್ದ ಶೇಂದಿ ಇಳಿಸುವ ಹಕ್ಕನ್ನು ಸರ್ಕಾರವು ರದ್ದುಗೊಳಿಸಿರುವುದಕ್ಕೆ ಕಾರಣವೇನು?

ಆ) ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ಇಳಿಸಲು ಅನುಮತಿ ನೀಡಿದ್ದು ಕೊಡಗು ಜಿಲ್ಲೆಯಲ್ಲಿ ಮಾತ್ರ ನಿಷೇಧಿಸಿರುವ ಸರ್ಕಾರದ ನಿರ್ಧಾರಕ್ಕೆ ಕಾರಣಗಳೇನು?

ಇ) ಕೊಡಗಿನಲ್ಲಿ ಸಾಕಷ್ಟು ಜನರ ಜೀವನೋಪಾಯ ಶೇಂದಿ ಇಳಿಸುವುದರಿಂದಲೇ ಸಾಗುತ್ತಿದ್ದು ಸರ್ಕಾರವು ಪುನಃ ಶೇಂದಿ ಇಳಿಸುವ ಅನುಮತಿಯನ್ನು ಮೂರ್ತೆದಾರರಿಗೆ ಮರಳಿ ಒದಗಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಕಲಬೆರಕೆ ಶೇಂದಿಯ ಸೇವನೆಯನ್ನು ತಡೆಗಟ್ಟುವ ಸಲುವಾಗಿ ರದ್ದುಗೊಳಿಸಲಾಗಿದೆ.

ಆ) ಸಾಕಷ್ಟು ಪ್ರಮಾಣದಲ್ಲಿ ಮರಗಳು ಲಭ್ಯವಿಲ್ಲದ ಕಾರಣ ಹಾಗೂ ಆರೋಗ್ಯಕ್ಕೆ ಹಾನಿಕರವಾದ ಕಲಬೆರಕೆ ಶೇಂದಿ ಸೇವನೆ ತಡೆಗಟ್ಟುವ ಸಲುವಾಗಿ ಇಡೀ ರಾಜ್ಯದಲ್ಲಿ, ಕೊಡಗು ಜಿಲ್ಲೆ